



# ಕಸ ಕೊನರಿ ಕಲೆಯಾಗಿ...

■ ರಮಣ್ ಶೆಟ್ಟಿ ರೆಂಜಾಳ್

**ನಿರುಪಯುಕ್ತ ವಸ್ತುಗಳಿಗೆ ಸುಂದರ ರೂಪ ಕೊಟ್ಟು ಕಸದಿಂದ ಕಲೆ ಅರಳಿಸಿದ್ದಾರೆ ಮಂಗಳೂರಿನ ಸುಮತಿ ಶೆಟ್ಟಿ.**

ಸಮುದ್ರ ತಟದ ಚಪ್ಪಟೆ ಕಲ್ಲುಗಳು ಬಣ್ಣ ಬಳಿದುಕೊಂಡು ಮನೆಯ ತೋಟದ ಅಂಚನ್ನು ಸಿಂಗರಿಸಿವೆ. ಹಾಲು, ಜ್ಯೂಸ್ ಕುಡಿದು ಬಿಸಾಡಿದ ಟೆಟ್ರಾಪ್ಯಾಕ್‌ಗಳು ಬೆಳ್ಳಿಯ ಸರಪಳಿಗಳಾಗಿ ತೂಗಾಡುತ್ತಿವೆ. ತುಂಡಾದ ಚಿಮಣಿಯ ಕೊಳವೆಗಳು ಅಲಂಕೃತ ಸ್ತಂಭಗಳಾಗಿವೆ. ಒಡೆದ ಮಣ್ಣಿನ ಮಡಕೆಗಳು, ಹಂಡೆಗಳು ಸುಂದರ ಮುಖವಾಡಗಳಾಗಿ ಜೀವತಳೆದಿವೆ. ಚಿಕ್ಕಪುಟ್ಟ ಅನಾಮಿಕ ಕಾಡು ಕಾಯಿ–ಹಣ್ಣುಗಳು ಪೋಣಿಸಿದ ಮುತ್ತಿನ ಹಾರಗಳಾಗಿವೆ.

ಬೇಡವೆಂದು ಬಿಸಾಡಿದ ತ್ಯಾಜ್ಯ ವಸ್ತುಗಳನ್ನೂ ಹೀಗೆ ಕಲೆಯಾಗಿ ಅರಳಿಸಿದವರು ಮಂಗಳೂರು ಸಮೀಪದ ಕಿನ್ನಿಗೋಳಿಯ ಕೆಮ್ರಾಲ್ ಗ್ರಾಮದ ಸುಮತಿ ಶೆಟ್ಟಿಯವರು.

ಒಡೆದ ಜಾಡಿಗಳು, ಮರದ ಒಣಗಿದ ಕೊಂಬೆಗಳು, ಪಾನೀಯಗಳ ಪ್ಯಾಕೆಟ್‌ಗಳು, ಪ್ಲಾಸ್ಟಿಕ್ ಬಾಟಲಿಗಳು, ಒಣಗಿದ ಕಾಯಿ–ಹಣ್ಣುಗಳು, ಫೈಬರ್ ಚೀಲಗಳು, ಹಳೆಯ ಟೈರುಗಳು ಇವ್ಯಾವೂ ಇಲ್ಲಿ ತ್ಯಾಜ್ಯವಾಗಿ ಕಸದ ಬುಟ್ಟಿ ಸೇರಿಲ್ಲ. ಬದಲಿಗೆ ಕಲಾತ್ಮಕ ವಸ್ತುಗಳಾಗಿ ಹೊಸ ರೂಪ ದಕ್ಕಿಸಿಕೊಂಡಿವೆ, ಮನೆಗೆ ಹೊಸ ನೋಟ ನೀಡಿವೆ.

ನಿರುಪಯುಕ್ತವಾದ ಸಾಮಾನುಗಳಿಂದ ಹೂಗುಚ್ಛ, ಗೋಪುರ, ಮಾನವಾಕೃತಿಗಳು, ಸ್ತಂಭಗಳು, ಮುಖವಾಡಗಳಂಥ ಆಲಂಕಾರಿಕ ವಸ್ತುಗಳನ್ನು ಮಾಡಿ ತಮ್ಮ ಮನೆ 'ಮಹಾಲಕ್ಷ್ಮಿ'ಯನ್ನು ಕಲಾತ್ಮಕಗೊಳಿಸಿದ್ದಾರೆ. ಮನೆಯ ತೋಟ ಹಾಗೂ ಹಜಾರಗಳಲ್ಲಿ ತೆಂಗು, ಗೆರಟೆ, ಮೊಟ್ಟೆಯ ಸಿಪ್ಪೆ, ಮುಳಿಹುಲ್ಲು, ಹಳೆಯ ಗ್ರಾಮಾಫೋನ್ ಪ್ಲೇಟುಗಳಿಂದ ರೂಪಾಂತರ ಪಡೆದ ಬಲೂನ್ ಗುಚ್ಛ, ಫಲ ತುಂಬಿದ ಮರ ಗಿಡಗಳು, ತಟ್ಟೆ–ಬುಟ್ಟಿಗಳು, ನವ್ಯ ಚಿತ್ರಕಲೆಯಂತಹ ಕಲಾಕೃತಿಗಳನ್ನೂ ಮಾಡಿದ್ದಾರೆ. ಅರ್ಧ ಎಕರೆ ಜಾಗವನ್ನು ಇದಕ್ಕೆಂದೇ ಮೀಸಲಿರಿಸಿದ್ದಾರೆ.

ಪುಟ್ಟ ಹುಡುಗಿಯಾಗಿದ್ದಾಗ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಸುಮತಿಯವರು ವಿವಾಹಾನಂತರ ಸುಮಾರು ನಾಲ್ಕು ದಶಕಗಳ ಕಾಲ ಮುಂಬೈ ನಿವಾಸಿಯಾಗಿದ್ದರು. ಆಗಲೂ ತಮ್ಮ ಮನೆಯ ಸೀಮಿತ ಸ್ಥಳದಲ್ಲಿಯೇ ಈ ರೀತಿ ತ್ಯಾಜ್ಯ ವಸ್ತುಗಳಿಂದ ಕಲಾತ್ಮಕ ಪರಿಕರಗಳನ್ನು ತಯಾರಿಸಿದ್ದರು. ಪತಿಯೊಡಗೂಡಿ ತಮ್ಮ ಊರಾದ ಕೆಮ್ರಾಲ್‌ಗೆ ಮರಳಿ ಬಂದ ಅವರಿಗೆ ಪತಿ ನಿಧನದ ನಂತರ ಈ ಕಲೆಯೇ ಒಂಟಿತನಕ್ಕೆ ಜಂಟಿಯಾಗಿದೆ. ತಮ್ಮ ಮನೆ, ಅಂಗಳ ಹಾಗೂ ತೋಟಕ್ಕೆ ವಿಭಿನ್ನ ರೂಪ ನೀಡಿ ಮಾದರಿಯೆನಿಸಿದ್ದಾರೆ.

ಹಳೆಯ, ನಿರುಪಯೋಗಿ ವಸ್ತುಗಳಿಗೆ ಹೊಸ ರೂಪ ಕೊಟ್ಟು ಆಕರ್ಷಕವಾಗಿಸುವ ಇವರ ತ್ಯಾಜ್ಯ ನಿರ್ವಹಣೆ, ಪರಿಸರಪ್ರೇಮ ಹಾಗೂ ಕಲಾತ್ಮಕತೆಯನ್ನು ಗುರುತಿಸಿ ಸ್ಥಳೀಯ ಸಂಘ ಸಂಸ್ಥೆಗಳು ಗೌರವಿಸಿವೆ. ಅಕ್ಕಪಕ್ಕದ ಶಾಲಾ ಕಾಲೇಜುಗಳ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನಿಲ್ಲಿಗೆ ಕರೆದುಕೊಂಡು ಬಂದು ಕಸದಿಂದ ರಸ ತೆಗೆಯುವ ಕಲೆಯ ದರ್ಶನ ಮಾಡಿಸುತ್ತಿದ್ದಾರೆ.

ಆಧುನಿಕ ಜೀವನಶೈಲಿಯಿಂದಾಗಿ ನಾಶವಾಗುತ್ತಿರುವ ಪರಿಸರದ ಸಂರಕ್ಷಣೆ ಕುರಿತು ಎಲ್ಲರಲ್ಲೂ ಜಾಗೃತಿ ಮೂಡಬೇಕು. ಈ ನಿಟ್ಟಿನಲ್ಲಿ ನನ್ನ ಪ್ರಯತ್ನ ಸಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸುತ್ತಾರೆ ಅವರು.

ಪ್ರತಿಕ್ರಿಯಿಸಿ: feedback@sudha.co.in

